

بسم اللہِ الرّحمٰن الرّحیم

# ವಿರೋಧಿಗಳ ಆಕ್ಷೇಪಣೆಗಳಿಗೆ ಉತ್ತರಿಸುವಾಗ ಸಾಮಾಜಿಕ ಮಾಧ್ಯಮದ ಸರಿಯಾದ ಬಳಕೆಯ ಬಗ್ಗೆ ಸುವರ್ಣ ಉಪದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–06–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇತ್ತೀಚಿನ ದಿನಗಳಲ್ಲಿ, ಸಾಮಾಜಿಕ ಮಾಧ್ಯಮವು ಪ್ರಯೋಜನಕಾರಿ ಆಗಿದ್ದರೂ, ನೋವನ್ನು ಉಂಟುಮಾಡುವ ಕೆಲವು ಸಂಗತಿಗಳೂ ಇವೆ. ಇದರ ಲಾಭ ಪಡೆದು, ಇತ್ತೀಚಿನ ದಿನಗಳಲ್ಲಿ ವಿರೋಧಿಗಳು ಅಹ್ಮದಿಯಾ ಜಮಾಅತಿನ ವಿರುದ್ಧ ಅತ್ಯಂತ ಅಸಭ್ಯವಾಗಿ ಮಾತನಾಡುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ)ರ ವಿರುದ್ಧ ಅವರು ಸುಳ್ಳು ಮತ್ತು ಕೊಳಕು ಮಾತುಗಳನ್ನು ಆಡುತ್ತಾರೆ. ಇದನ್ನು ಕೇಳಿ ಅಹ್ಮದಿಯರ ಹೃದಯವು ಛಿದ್ರವಾಗುತ್ತದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಕೆಲವು ಅಹ್ಮದಿಯರು ಕೂಡ ತಪ್ಪು ರೀತಿಯಲ್ಲಿ ಉತ್ತರ ನೀಡುತ್ತಾರೆ. ಅವರ ಉದ್ದೇಶ ಶುದ್ಧವಾಗಿದ್ದರೂ, ಕೆಲವೊಮ್ಮೆ ತಪ್ಪು ಅರ್ಥವನ್ನು ನೀಡಬಹುದಾದಂತಹ ಪದಗಳು ಅವರಿಂದ ಹೊರಬೀಳುತ್ತವೆ. ಇದು ನಮ್ಮ ರೀತಿಯಲ್ಲ; ಅಹ್ಮದಿಯರು ಇದರಿಂದ ದೂರವಿರಬೇಕು.

ತಪ್ಪು ಭಾಷೆಯನ್ನು ಬಳಸುವುದು ಅಥವಾ ಯಾರಿಗಾದರೂ ಅವಮಾನ ಉಂಟುಮಾಡುವಂತಹ ಪದಗಳು ಅರಿವಿಲ್ಲದೆ ನಮ್ಮ ಬಾಯಿಂದ ಹೊರಬೀಳುವ ರೀತಿಯಲ್ಲಿ ಉತ್ತರ ನೀಡುವುದು ನಮ್ಮ ಕೆಲಸವಲ್ಲ. ವಿರೋಧಿಗಳು ಇದರಿಂದ ಲಾಭ ಪಡೆದು 'ನಾವು ಹಝ್ರತ್ ಪೈಗಂಬರ್(ಸ) ಅಥವಾ ಸಹಾಬಿಯರನ್ನು ಅಪಮಾನಿಸುವವರು' ಎಂದು ಹೇಳಬಹುದು – ನಊಝುಬಿಲ್ಲಾಹ್. ಆದರೆ ನಮ್ಮ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರಿಗೆ ಇರುವ ಸ್ಥಾನಮಾನದ ಒಂದು ಅಣುವಿನಷ್ಟು ಅಂಶ ಕೂಡ ಈ ಜನರಿಗೆ ಇರುವುದಿಲ್ಲ. ನಮ್ಮೆಲ್ಲವೂ ಹಝ್ರತ್ ಪೈಗಂಬರ್(ಸ)ರಿಗೆ ಅರ್ಪಿತವಾಗಿದೆ. ಅವರೇ ಅಲ್ಲಾಹನ ಪ್ರೀತಿಯ ಮತ್ತು ಕೊನೆಯ ಪ್ರವಾದಿಯಾದ ಖಾತಮುಲ್ ಅಂಬಿಯಾ ಆಗಿರುವರು. ಅವರ ಸಹಚರರಾದ ಸಹಾಬಿಯರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವ ಮಾತುಗಳು ನಮ್ಮ ವಿರೋಧಿಗಳ ಊಹೆಗೂ ಮೀರಿದ್ದಾಗಿವೆ.

ಆದ್ದರಿಂದ, ನಮ್ಮ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ)ರ ಸ್ಥಾನಮಾನ ಮಾತ್ರವಲ್ಲ, ಅದಾದರೋ ಸರ್ವಶ್ರೇಷ್ಠವಾಗಿದೆ, ಅಲ್ಲಿಗೆ ಯಾರಿಗೂ ತಲುಪಲು ಸಾಧ್ಯವಿಲ್ಲ. ಅದರ ಜೊತೆಗೆ ಹಝ್ರತ್ ಪೈಗಂಬರ್(ಸ)ರ ಸಹಾಬಿಯರಿಗೂ ನಮ್ಮ ಹೃದಯದಲ್ಲಿ ದೊಡ್ಡ ಸ್ಥಾನವಿದೆ. ಈ ಸಂಗತಿಯನ್ನು ಪ್ರತಿಯೊಬ್ಬ ಅಹ್ಮದಿಯೂ ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ರೀತಿಯಲ್ಲಿ ತಪ್ಪು ಗ್ರಹಿಕೆಯನ್ನು ಉಂಟುಮಾಡುವ ಅಥವಾ ತಪ್ಪು ಪ್ರಭಾವವನ್ನು ಉಂಟುಮಾಡಲು ಸಾಧ್ಯತೆಯಿರುವ ಮಾತುಗಳನ್ನು ಆಡುವುದರಿಂದ ದೂರವಿರಬೇಕು. ವಿರೋಧಿಗಳ ಕೊಳಕು ಮಾತುಗಳಿಗೆ ಅದೇ ದಾಟಿಯಲ್ಲಿ ಪ್ರತಿಕ್ರಯಿಸಿಕೊಂಡು ನಾವು ಬಹಳ ದೊಡ್ಡ ಸ್ವಾಭಿಮಾನವನ್ನು ಪ್ರದರ್ಶಿಸಿದ್ದೇವೆ ಎಂದು ಕೆಲವು ಅಹ್ಮದಿಯರು ಭಾವಿಸುತ್ತಾರೆ. ಇದರ ಬಗ್ಗೆ ಕೇಳಿದರೆ ಇದೇ ಅವರ ಉತ್ತರವಾಗಿರುತ್ತದೆ. ಆದರೆ ಈ ಸ್ವಯಂ ಕಲ್ಪಿತ 'ಸ್ವಾಭಿಮಾನ' ಅಜ್ಞಾನವಾಗಿದೆ. ಅಹ್ಮದಿಯಾದ ಒಬ್ಬನು ಯಾವುದೇ ರೀತಿಯಲ್ಲಿ ತಪ್ಪು ಅರ್ಥ ಉಂಟುಮಾಡುವಂತಹ ಮಾತುಗಳನ್ನು ಆಡಿದರೆ, ಅವನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಮತ್ತು ಜಮಾಅತಿಗೆ ಅಪಕೀರ್ತಿ ಮಾಡಿದಂತೆ ಆಗುತ್ತಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನೀವು ತಾಳ್ಮೆ ವಹಿಸಬೇಕು. ಯಾವಾಗಲೂ ಸಹನೆಯನ್ನು ತೋರಿಸಬೇಕು." ಒಂದೆಡೆ ಅವರು ಹೇಳಿದರು: "ಇವರು ನನ್ನನ್ನು ಬೈಯ್ಯುತ್ತಾರೆ, ಆದರೆ ನಾನು ಅವರ ಬೈಗುಳದ ಬಗ್ಗೆ ಚಿಂತಿಸುವುದೂ ಇಲ್ಲ ದುಃಖಿಸುವುದೂ ಇಲ್ಲ. ಏಕೆಂದರೆ ಅವರು ಉತ್ತರ ನೀಡುವುದರಲ್ಲಿ ಸೋತು ಹೋಗಿದ್ದಾರೆ ಹಾಗೂ ತಮ್ಮ ಪರಾಜಯ ಮತ್ತು ಕೀಳರಿಮೆಯನ್ನು ಬೈಗುಳಗಳ ಮೂಲಕವಲ್ಲದೇ ಅವರಿಗೆ ಮರೆಮಾಚಲು ಸಾಧ್ಯವಾಗುವುದಿಲ್ಲ. ಅವರು ಈ ನೀಚ ಮತ್ತು ಕೆಟ್ಟ ಮಾರ್ಗವನ್ನು ಬಳಸುತ್ತಾರೆ. ಏಕೆಂದರೆ ಅವರ ಬಳಿ ಯಾವುದೇ ಪುರಾವೆ ಇಲ್ಲ, ಯಾವುದೇ ಉತ್ತರವಿಲ್ಲ. ಆದ್ದರಿಂದ ಈ ಜನರು ಕೇವಲ ಕೆಟ್ಟ ಮಾತುಗಳನ್ನು ಆಡಲು ಬಯಸುತ್ತಾರೆ."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಕುಫ್ರ್ ಫತ್ವಗಳನ್ನು ನೀಡಲಿ, ಸುಳ್ಳು ಮೊಕದ್ದಮೆಗಳನ್ನು ಹೂಡಲಿ, ವಿವಿಧ ರೀತಿಯ ಸುಳ್ಳು ಆಪಾದನೆಗಳನ್ನು ಮಾಡಲಿ, ಅವರು ತಮ್ಮ ಎಲ್ಲ ಶಕ್ತಿಗಳನ್ನು ಬಳಸಿ ನನ್ನನ್ನು ವಿರೋಧಿಸಲಿ. ಅನಂತರ ಅಂತಿಮ ನಿರ್ಧಾರ ಯಾರ ಪರವಾಗಿರುತ್ತದೆ ಎಂದು ನೋಡಲಿ. ನೀವು ಮಾಡಬೇಕಾದ ಪ್ರಯತ್ನವನ್ನು ಮಾಡಿರಿ, ಆದರೆ ಅಲ್ಲಾಹನು ನನ್ನೊಂದಿಗಿದ್ದಾನೆ. ಅಲ್ಲಾಹನು ಯಾರ ಪರವಾಗಿದ್ದಾನೆ ಎಂದು ಅಂತಿಮ ನಿರ್ಧಾರದಿಂದ ನೀವು ಕಾಣುವಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಅವರ ಬೈಗುಳಗಳ ಕುರಿತು ಚಿಂತಿಸಿದರೆ, ಅಲ್ಲಾಹನು ನನಗೆ ವಹಿಸಿರುವ ಪ್ರಧಾನ ಕೆಲಸವು ಪೂರ್ತಿಯಾಗದೇ ಉಳಿದುಬಿಡುವುದು. ಆದ್ದರಿಂದ ನಾನು ಅವರ ಕೆಟ್ಟ ಮಾತುಗಳ ಬಗ್ಗೆ ಚಿಂತಿಸದೇ ಇರುವ ಹಾಗೆಯೇ ನನ್ನ ಜಮಾಅತಿನವರು ಅವರ ಕೆಟ್ಟ ಮಾತುಗಳನ್ನು ಕೇಳಿ ಸಹಿಸಿಕೊಳ್ಳುವುದು ಸೂಕ್ತ

ಎಂಬುವುದಾಗಿದೆ ನನ್ನ ಉಪದೇಶ. ಎಂದಿಗೂ ಬೈಗುಳಗಳಿಗೆ ಕೆಟ್ಟ ಮಾತುಗಳಿಂದ ಉತ್ತರ ನೀಡಬಾರದು. ಏಕೆಂದರೆ ಈ ರೀತಿ ಮಾಡುವುದರಿಂದ ಅನುಗ್ರಹ ಇಲ್ಲವಾಗುತ್ತದೆ.”

ಅವರು ತಾಳ್ಮೆ ಮತ್ತು ಸಹನೆಯ ಮಾದರಿಯನ್ನು ತೋರಿಸಬೇಕು ಮತ್ತು ಉತ್ತಮ ಸ್ವಭಾವದಿಂದ ವರ್ತಿಸಬೇಕು. ವಿವೇಕ ಮತ್ತು ಕೋಪದ ನಡುವೆ ಅತಿ ತೀವ್ರವಾದ ವಿರೋಧವಿದೆ ಎಂಬುದನ್ನು ನೆನಪಿನಲ್ಲಿಡಿರಿ. ಆವೇಶ ಮತ್ತು ಕೋಪ ಬರುವಾಗ ಬುದ್ಧಿ ಸ್ಥಿರವಾಗಿರಲು ಸಾಧ್ಯವಲ್ಲ. ಆದರೆ ಯಾರು ತಾಳ್ಮೆ ವಹಿಸುತ್ತಾರೋ ಮತ್ತು ಸಹನೆಯ ಮಾದರಿಯನ್ನು ತೋರಿಸುತ್ತಾರೋ, ಅವರಿಗೆ ಒಂದು ಪ್ರಕಾಶ ನೀಡಲಾಗುತ್ತದೆ. ಅದರಿಂದ ಅವರ ಬುದ್ಧಿ ಮತ್ತು ಚಿಂತನೆಯ ಶಕ್ತಿಗಳಲ್ಲಿ ಒಂದು ಹೊಸ ಬೆಳಕು ಮೂಡುತ್ತದೆ ಹಾಗೂ ಆ ಬೆಳಕಿನಿಂದ ಮತ್ತಷ್ಟು ಬೆಳಕು ಉಂಟಾಗುತ್ತದೆ. ಆದರೆ ಕೋಪ ಮತ್ತು ಭಾವೋದ್ವೇಗದಲ್ಲಿ ಹೃದಯ ಮತ್ತು ಮೆದುಳು ಕತ್ತಲಾಗುತ್ತದೆ. ಹೀಗೆ ಕತ್ತಲೆಯಿಂದ ಕತ್ತಲೆ ಹುಟ್ಟುತ್ತದೆ.

ಆದ್ದರಿಂದ, ಇದು ನಾವು ಯಾವಾಗಲೂ ನೆನಪಿಟ್ಟುಕೊಳ್ಳಬೇಕಾದ ಪಾಠವಾಗಿದೆ. ಅಹ್ಮದಿಯೇತರರಾದ ನಾಮಧಾರಿ ಮುಲ್ಲಾಗಳ ಮತ್ತು ಆಕ್ಷೇಪಕರ ಆಕ್ಷೇಪಣೆಗಳಿಗೆ ಸಾಮಾಜಿಕ ಮಾಧ್ಯಮದಲ್ಲಿ ಉತ್ತರ ನೀಡಲು ಪ್ರಾರಂಭಿಸುವ ಸ್ವಯಂಘೋಷಿತ ವಿದ್ವಾಂಸರು ಇದರಿಂದ ದೂರವಿರಬೇಕು. ಉತ್ತರಗಳನ್ನು ಹುಡುಕಬೇಕಾದರೆ, ಜಮಾಅತಿನ ವಿದ್ವಾಂಸರಿಂದ ಮತ್ತು ಜಮಾಅತಿನ ಸಾಹಿತ್ಯದ ಕುರಿತು ಆಳವಾದ ಜ್ಞಾನವಿರುವವರೊಡನೆ ಕೇಳಬೇಕು. ವಿರೋಧಿಗಳ ವಾದಗಳು ಮತ್ತು ಆರೋಪಗಳನ್ನು ಚೆನ್ನಾಗಿ ಖಂಡಿಸುವಂತಹ ಪ್ರಬಲ ಉತ್ತರಗಳನ್ನು ನೀಡಬೇಕು.

ನಿಜವಾಗಿಯೂ ಸರಿಯಾದ ಇಸ್ಲಾಮಿನ ಪಾಠವಾಗಿರುವ ಹಝ್ರತ್ ಮಸೀಹ್ ಮೌಊದ್(ಅ)ರ ಬೋಧನೆ ಪ್ರಕಾರ ನಡೆಯಬೇಕು. ಇಲ್ಲದಿದ್ದರೆ, ನೀವು ಜಮಾಅತಿನಲ್ಲಿ ಇದ್ದುಕೊಂಡು ಜಮಾಅತಿಗೆ ಕೆಟ್ಟ ಹೆಸರು ತರುವವರಾಗುತ್ತೀರಿ. ಅಲ್ಲಾಹನು ನಮ್ಮನ್ನು ದುಷ್ಟರ ಕೆಡುಕುಗಳಿಂದ ರಕ್ಷಿಸಲಿ. ಪೊಳ್ಳು ಅಭಿಮಾನವನ್ನು ತೋರಿಸುವ ಮತ್ತು ಕೆಲವೊಮ್ಮೆ ಅನಾವಶ್ಯಕವಾದ ಕೆಲವು ಪದಗಳನ್ನು ಬಳಸಿ ವಿವಾದ ಮತ್ತು ಕಲಹವನ್ನು ಉಂಟುಮಾಡಲು ಕಾರಣರಾಗುವ ಜನರಿಗೆ ಕೂಡ ಅಲ್ಲಾಹನು ಬುದ್ಧಿ ನೀಡಲಿ.

ನಾವು ಸಾಮಾಜಿಕ ಮಾಧ್ಯಮದಲ್ಲಿ ಈ ಉತ್ತರಗಳನ್ನು ನೀಡುವ ಬದಲು, ಅಲ್ಲಾಹನ ಮುಂದೆ ವಿನಮ್ರರಾಗಿ ಬಾಗಿದರೆ ಮತ್ತು ನಮ್ಮ ನಮಾಝ್‌ಗಳನ್ನು ಸಮಾಧಾನದಿಂದ ನಿರ್ವಹಿಸಿದರೆ, ಅಲ್ಲಾಹನ ಸ್ವಾಭಿಮಾನ (ಗೈರತ್) ಬೇಗನೆ ಉಕ್ಕಿ ಬರಲು ನಮ್ಮ ಸುಜೂದ್‌ಗಳಲ್ಲಿ ನೋವನ್ನು ಉಂಟುಮಾಡಿದರೆ, ಉತ್ತರ ನೀಡುವ ಮೂಲಕ ನಾವು ಪಡೆಯಲು ಬಯಸುವ ಫಲಿತಾಂಶಗಳಿಗಿಂತಲೂ ಉತ್ತಮ ಫಲಿತಾಂಶಗಳನ್ನು ಬಹಳ ಬೇಗನೇ ನಾವು ಪಡೆಯಬಹುದು. ಆದ್ದರಿಂದ, ಅಹ್ಮದಿ ಹೀಗೆ ಹೇಳಿದನು, ಹಾಗೆ ಹೇಳಿದನು ಎಂದು ಅನಾವಶ್ಯಕವಾಗಿ ಹೇಳಲು ಶತ್ರುಗಳಿಗೆ ಅವಕಾಶ ನೀಡುವಂತಹ ಮಾತುಗಳಿಂದ ಪ್ರತಿಯೊಬ್ಬ ಅಹ್ಮದಿಯೂ ದೂರವಿರಬೇಕು. ನಮ್ಮ ಸ್ವಭಾವಗುಣ ಬಹಳ ಉನ್ನತವಾಗಿರಬೇಕು. ಯಾರ ನೈತಿಕತೆ ಉನ್ನತವಾಗಿಲ್ಲವೋ, ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಬೈಅತಿನ ಹಕ್ಕನ್ನು ಪೂರೈಸಿಲ್ಲ. ಆದ್ದರಿಂದ, ನಾವು ನಮ್ಮನ್ನು ಪರಿಶೀಲಿಸಿಕೊಳ್ಳಬೇಕು, ಪ್ರತಿಯೊಬ್ಬನೂ ತನ್ನ ಅವಲೋಕನ ನಡೆಸಿಕೊಳ್ಳಬೇಕು, ಯೋಚಿಸಬೇಕು ಮತ್ತು ತಪ್ಪು ರೀತಿಯ ಉತ್ತರಗಳನ್ನು ನೀಡುವುದರ ಬದಲು ದುಆಗಳಿಗೆ ಗಮನ ಕೊಡಬೇಕು. ಅಲ್ಲಾಹನು ನಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ. ವಿರೋಧಿಗಳ ಕೆಡುಕು ಅವರಿಗೆ ತಿರುಗೇಟಾಗಲಿ ಮತ್ತು ಅದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*(atba)**
At, ***'Masjid Mubarak'**, Islamabad, Tilford,* U.K. On 06-06-2025
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* Basheer K.P. Manjeshwar
***Published By**:* Kannada Isha'at Team for Nazarath Nashr-O-Isha'ath, Qadian
**Email**: *khutuba.kannada@gmail.com*
**You can find all the Sermons archived at**: www.alislam.org/friday-sermon